ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 22–08–2019

## ಪತ್ರಿಕಾ ಆಮಂತ್ರಣ

1. ರಷ್ಯಾದ ಹೀರೋ ಮತ್ತು ಟೈಮ್ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಭಾಗವಹಿಸಿದ್ದ ಹಾಗೂ ರಾಷ್ಟ್ರಪ್ರಶಸ್ತಿ ವಿಜೇತ ಸರಳ ವಿರಳ ಸಾಕ್ಷ್ಯಚಿತ್ರ ಪ್ರದರ್ಶನ ಹಾಗೂ ಅಭಿನಂದನಾ ಸಮಾರಂಭ.

ಸಾವಯವ ಕೃಷಿ ತಜ್ಞ ಎಲ್. ನಾರಾಯಣ ರೆಡ್ಡಿ ಅವರ ಜೀವನ ಸಾಧನೆ ಕುರಿತ ಸರಳ ವಿರಳ ಚಿತ್ರದ ನಿರ್ದೇಶಕ ಈರೇಗೌಡ ಮತ್ತು ನಿರ್ಮಾಪಕಿ ಹೆಚ್. ಆರ್. ಸುಜಾತ ಅವರಿಗೆ ಅಭಿನಂದನೆ

ವಾರ್ತಾ ಬಳಗ ಆಯೋಜಿಸಿರುವ ಈ ವಿಶೇಷ ಸಮಾರಂಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಎಸ್. ಎನ್. ಸಿದ್ದರಾಮಪ್ಪ, ಹೆಸರಾಂತ ಚಲನಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ ಮತ್ತು ಪಿ. ಶೇಷಾದ್ರಿ ಅವರೂ ಪಾಲ್ಗೊಳ್ಳಲಿದ್ದಾರೆ.

ದಿನಾಂಕ : ಆಗಸ್ಟ್ 23, 2019 ಶುಕ್ರವಾರ ಸಮಯ : ಸಂಜೆ 4–30 ಗಂಟೆಗೆ

ಸ್ಥಳ : ಸುಲೋಚನಾ ಸಭಾಂಗಣ, ಮೊದಲನೇ ಮಹಡಿ, ವಾರ್ತಾ ಸೌಧ,
ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

## ಪತ್ರಿಕಾ ಪ್ರಕಟಣೆ

## ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬೆಣ್ಣೆ ಅಲಂಕಾರ

ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :

ಬೆಂಗಳೂರು ನಗರದ ಮಹಾಲಕ್ಷ್ಮೀ ಬಡಾವಣೆಯಲ್ಲಿರುವ ಶ್ರೀ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾಲಯವು ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಹಿರಿಯ "ಘೋಷಿತ" ಸಂಸ್ಥೆಯಾಗಿರುತ್ತದೆ. ಈ ದೇವಾಲಯದಲ್ಲಿ ಆಗಸ್ಟ್ 24 ರಂದು ಶ್ರೀ ಸ್ವಾಮಿಯವರಿಗೆ 44ನೇ ವರ್ಷದ ಬೆಣ್ಣೆ ಅಲಂಕಾರ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಪಾಲ್ಗೊಂಡು, ಸ್ವಾಮಿ ಕೃಪೆಗೆ ಪಾತ್ರರಾಗಬೇಕೆಂದು ಈ ದೇವಾಲಯದ ಕಾರ್ಯ ನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜನಸ್ಪಂದನ ಕಾರ್ಯಕ್ರಮ

ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ಉತ್ತರ) ಯಶವಂತಪುರ ಕಚೇರಿಯಲ್ಲಿ ಪ್ರತಿ ಮಂಗಳವಾರ ಮಧ್ಯಾಹ್ನ 3-00 ಗಂಟೆಗೆ ಈ ಕಚೇರಿಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಕುಂದುಕೊರತೆ ಬಗ್ಗೆ 'ಜನಸ್ಪಂದನ' ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಸಾರ್ವಜನಿಕರು ತಮ್ಮ ಅಹವಾಲು ಮತ್ತು ಸಲಹೆಗಳೇನಾದರೂ ಇದ್ದಲ್ಲಿ ಸದರಿ ಸಭೆಗೆ ಖುದ್ದು ಹಾಜರಾಗಿ ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್.ಟಿ.ಓ) ರವರ ಗಮನಕ್ಕೆ ತರಲು ಸೂಚಿಸಲಾಗಿದೆ. ಸಾಧ್ಯವಾದಲ್ಲಿ ತಮ್ಮ ಅಹವಾಲುಗಳಿಗೆ ಸ್ಥಳದಲ್ಲಿಯೇ ಸ್ಪಂದಿಸಿ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಸಾರ್ವಜನಿಕರು ಹೆಚ್ಚಿನ ಜನಸಂಖ್ಯೆಯಲ್ಲಿ ಭಾಗವಹಿಸಿ ಕಚೇರಿಗೆ ಸಂಬಂಧಿಸಿದಂತೆ ತಮ್ಮ ಕೆಲಸ ಕಾರ್ಯಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಿಕೊಳ್ಳಬಹುದಾಗಿದೆ ಎಂದು ಕಚೇರಿಯ ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೇಕರಿ ತಂತ್ರಜ್ಞಾನ ತರಬೇತಿ

ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :

ಬೇಕರಿ ತರಬೇತಿ ಕೇಂದ್ರ, ಕೃಷಿ ವಿಶ್ವ ವಿದ್ಯಾನಿಲಯ, ಹೆಬ್ಬಾಳ, ಬೆಂಗಳೂರು ಇಲ್ಲಿ ಹದಿನಾಲ್ಕು ವಾರದ ಬೇಕರಿ ಟೆಕ್ನಾಲಜಿ ತರಬೇತಿಗಾಗಿ ಅರ್ಜಿ ಸ್ವಿಕರಿಸಲಾಗುವುದು. ಅಭ್ಯರ್ಥಿಯು ಕನಿಷ್ಟ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ) ಪಾಸ್/ಫೇಲ್ ಆಗಿರಬೇಕು. ನಿಗದಿತ ಅರ್ಜಿ ಪಾರಂಗಳನ್ನು ರೂಪಾಯಿ 10-00 (ಹತ್ತು) ಸಂದಾಯಿಸಿ, ಅರ್ಜಿಯನ್ನು ಪಡೆದು ಭರ್ತಿಮಾಡಿದ ಅರ್ಜಿಯನ್ನು ದಿನಾಂಕ 31.08.2019 ರಂದು 12.00 ಗಂಟೆಯ ಒಳಗೆ, ಸಂಯೋಜಕರಿಗೆ ತಲುಪಿಸಬೇಕು. ಹೆಚ್ಚಿನ ವಿವರಗಳಿಗೆ ಸಂಯೋಜಕರು, ಬೇಕರಿ ತರಬೇತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಹೆಬ್ಬಾಳ-560024 ಇವರನ್ನು ಖುದ್ದಾಗಿ ಅಥವಾ 080-23513370 ದೂರವಾಣಿಯ ಮೂಲಕ ಸಂಪರ್ಕಿಸಬಹುದಾಗಿದೆ.

## BESCOM - Awareness Programmes

Bengaluru, August 22 (Karnataka Information)

BESCOM has been conducting several awareness programmes to create Electrical Safety Awareness among Public through various Media such as TV, Radio, Newspapers, Distribution of Pamphlets, Commercial Ads through Cinema Theatres etc.

Children being unaware of the dangers caused due to Electricity, are vulnerable to Electrical Accidents. BESCOM has initiated a special awareness campaign to sensitise children regarding Electrical safety. Various competitions among Govt. Schools/PU Colleges are being conducted in coordination with education department since August 2019. The details are as follows:

1. Drawing/Painting Competitions were conducted in all Govt. schools/PU colleges of 8 Districts namely Bangalore Urban, Bangalore Rural, Tumkur, Kolar, Chikkaballapura, Ramanagar, Davangere & Chitradurga pertaining to BESCOM jurisdiction from 02.08.2019 to 09.08.2019.

2. Taluk level Essay Competition is organized for students of Govt. schools/PU colleges on 22.08.2019 in every Taluk of BESCOM Jurisdiction at designated location with prior intimation to the Education Department.

3. Taluk level Elocution Competition is organized for students of Govt. schools/PU colleges on 12.09.2019 in every Taluk of BESCOM Jurisdiction at designated locations with prior intimation to the Education Department.

Taluk wise prize winners of all the Age groups will be issued with Cash Awards on the day of Elocution Competition.

## Bakery Training

Bengaluru, August 22 (Karnataka Information)

Bakery Training Unit, University of Agricultural Sciences, Hebbal, Bangalore – 560 024 has invited application for **14 weeks certificate course in Bakery Technology.** Minimum qualification required is Pass/ Fail in SSLC/10$^{th}$ Standard. The applications may be obtained from Bakery Training Unit by paying a fee of Rs.10/- and the completed application may be sent to Co-ordinator, Bakery Training Unit, UAS, Hebbal, Bangalore – 560 024. The last date to issue and receive application is on or before 31.08.2019 at 12.00 noon. Interested candidates can contact Co-ordinator, Bakery Training Unit, UAS, Hebbal, Bangalore – 560 024, personally or through phone 080-23513370.

## ವಿದ್ಯುತ್ ಸುರಕ್ಷತೆ ಕುರಿತು ಜಾಗೃತಿ

**ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :**

ಬೆವಿಕಂ ಸಾರ್ವಜನಿಕರಲ್ಲಿ ವಿದ್ಯುತ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ವಿವಿಧ ಮಾಧ್ಯಮಗಳಾದ ಟಿವಿ, ರೇಡಿಯೋ, ದಿನಪತ್ರಿಕೆಗಳು, ಸಿನಿಮಾ ಥಿಯೇಟರ್‌ಗಳಲ್ಲಿ ಪ್ರಚುರ ಪಡಿಸುವ ಹಾಗೂ ಕರಪತ್ರ ವಿತರಿಸುವ ಮೂಲಕ ನಡೆಸಿಕೊಂಡು ಬರುತ್ತಿದೆ.

ವಿದ್ಯುತ್‌ನಿಂದ ಮಕ್ಕಳಿಗೆ ಹೆಚ್ಚು ಅಪಾಯ ಸಂಭವಿಸುತ್ತಿದ್ದು, ಅವರಲ್ಲಿ ವಿದ್ಯುತ್ ಸುರಕ್ಷತೆಯ ಕುರಿತಂತೆ ಅರಿವು ಮೂಡಿಸಲು ಬೆವಿಕಂ ವಿಶೇಷ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿದೆ. ಸದರಿ ಅಭಿಯಾನದ ಅಂಗವಾಗಿ ಬೆವಿಕಂ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಾದ ಬೆಂಗಳೂರು ನಗರ/ಗ್ರಾಮಾಂತರ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಸರ್ಕಾರಿ ಶಾಲೆ ಮತ್ತು

ಪಿ.ಯು ಕಾಲೇಜುಗಳ ವಿದ್ಯಾರ್ಥಿಗಳಿಗೆ, ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ, ಆಗಸ್ಟ್ 2019 ರಿಂದ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸಲಾಗುತ್ತಿದೆ.

1. ಚಿತ್ರಕಲೆ ಸ್ಪರ್ಧೆ:
   ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿವಿಧ ವಯೋವರ್ಗದ ವಿದ್ಯಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆಯನ್ನು ದಿನಾಂಕ 02.08.2019 ರಿಂದ 09.08.2019 ರವರೆಗೆ ನಡೆಸಲಾಗಿರುತ್ತದೆ.

2. ಪ್ರಬಂಧ ಸ್ಪರ್ಧೆ:
   ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿವಿಧ ವಯೋವರ್ಗದ ವಿದ್ಯಾರ್ಥಿಗಳಿಗೆ ತಾಲ್ಲೂಕು ಮಟ್ಟದ ಪ್ರಬಂಧ(ವಿದ್ಯುತ್ ಸುರಕ್ಷತೆ ಕುರಿತಂತೆ) ಸ್ಪರ್ಧೆಯನ್ನು ನಿಗಧಿತ ಸ್ಥಳಗಳಲ್ಲಿ, ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ದಿನಾಂಕ 22.08.2019 ರಂದು ಆಯೋಜಿಸಲಾಗಿರುತ್ತದೆ.

3. ಭಾಷಣ ಸ್ಪರ್ಧೆ:
   ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿವಿಧ ವಯೋವರ್ಗದ ವಿದ್ಯಾರ್ಥಿಗಳಿಗೆ, ತಾಲ್ಲೂಕು ಮಟ್ಟದ ಭಾಷಣ (ವಿದ್ಯುತ್ ಸುರಕ್ಷತೆ ಕುರಿತಂತೆ) ಸ್ಪರ್ಧೆಯನ್ನು ನಿಗಧಿತ ಸ್ಥಳಗಳಲ್ಲಿ ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ದಿನಾಂಕ 12.09.2019 ರಂದು ಆಯೋಜಿಸಲಾಗಿರುತ್ತದೆ.

ಎಲ್ಲಾ ಸ್ಪರ್ಧೆಗಳ ತಾಲ್ಲೂಕು ಮಟ್ಟದ ವಿಜೇತರಿಗೆ, ದಿನಾಂಕ 12.09.2019 ರಂದು ನಡೆಯುವ ಭಾಷಣ ಸ್ಪರ್ಧೆಯ ದಿನದಂದೆ ಬಹುಮಾನ ವಿತರಣೆಯ ಕಾರ್ಯಕ್ರಮವನ್ನು ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲ್ಲೂಕುಗಳ ನಿಗಧಿತ ಸ್ಥಳಗಳಲ್ಲಿ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಎಸಿಬಿ ದಾಳಿ

ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :

ಕೋಲಾರ ಜಿಲ್ಲೆ ಮತ್ತು ತಾಲೂಕು, ಬೆಳಮಾರನಹಳ್ಳಿ ಗ್ರಾಮದ ನಿವಾಸಿಯೊಬ್ಬರು ಜಮೀನನ್ನು ಸರ್ವೆ ಮಾಡಿಸಿ ಅಳತೆ ಮಾಡಿಕೊಡಲು ಕೋರಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಸರ್ವೆ ಶಾಖೆ, ಕೋಲಾರ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿಕೊಂಡಿರುತ್ತಾರೆ. ಲೋಕೇಶ್, ಸರ್ವೆ ಸೂಪರ್‌ವೈಸರ್ ರವರು

ಜಮೀನನ್ನು ಸರ್ವೇ ಮಾಡಲು ಸರ್ವೇಯರ್ ರವರನ್ನು ಹಂಚಿಕೆ ಮಾಡಿ ಸರ್ವೇಮಾಡಿಸಿ ಕೊಡುವುದಕ್ಕೆ ರೂ.3,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:21/08/2019 ರಂದು ಲೋಕೇಶ್ ರವರು ದೂರುದಾರರಿಂದ ರೂ.3,000/- ಲಂಚದ ಹಣವನ್ನು ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಕೋಲಾರ ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## ವಿದ್ಯುತ್ ಮರುಸ್ಥಾಪನೆಗೆ ಬೆಸ್ಕಾಂ ತಂಡ

ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಗೆ ಒಳಪಡುವ ಏಳು ಜಿಲ್ಲೆಗಳಲ್ಲಿ ಇತ್ತೀಚಿನ ನೆರೆಹಾವಾಳಿಯಿಂದ ಹಾನಿಗೊಳಗಾದ ವಿದ್ಯುತ್ ಕಂಬಗಳು, ತಂತಿಗಳು ಮತ್ತು ಪರಿವರ್ತಕಗಳನ್ನು ತ್ವರಿತವಾಗಿ ದುರಸ್ತಿಗೊಳಿಸಿ ವಿದ್ಯುತ್ ಸರಬರಾಜನ್ನು ಮರುಕಲ್ಪಿಸುವ ಕಾರ್ಯಕ್ಕೆ ಬೆಸ್ಕಾಂನ ನಾಲ್ವರು ಇಂಜಿನಿಯರುಗಳು ಮತ್ತು ಐವತ್ತು ಪವರ್‌ಮೆನ್‌ಗಳಿರುವ ಎರಡನೇ ತಂಡವನ್ನು ಇಂದು ಕಳುಹಿಸಿಕೊಟ್ಟಿದೆ.

ಹೆಸ್ಕಾಂ ವ್ಯಾಪ್ತಿಯಲ್ಲಿ ಹಾನಿಗೊಳಗಾದ ವಿದ್ಯುತ್ ಮೂಲಭೂತ ಸೌಲಭ್ಯವನ್ನು ಸರಿಪಡಿಸುವ ಕಾರ್ಯದಲ್ಲಿ ನೆರವಾಗಲು ಬೆಸ್ಕಾಂ ದಿನಾಂಕ 19.08.2019 ರಂದು ಈಗಾಗಲೇ ಒಂದು ತಂಡವನ್ನು ನಿಯೋಜಿಸಿದ್ದು, ಈಗ ಎರಡನೇ ತಂಡವನ್ನು ಕಳುಹಿಸಿದೆ.

ಈ ಎರಡು ತಂಡಗಳು ಮುಂದಿನ ಎರಡು ವಾರಗಳ ಕಾಲ ವಿದ್ಯುತ್ ಮೂಲಸೌಲಭ್ಯಗಳ ದುರಸ್ತಿ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದೆ.

## BESCOM deputes second team for restoration of power supply

Bengaluru, August 22 (Karnataka Information)

BESCOM has deputed a second team consisting of 4 Engineers and 50 Power men to help restoration of power supply infrastructure affected in flood hit areas coming under the jurisdiction of Hubli Electricity Supply Company (HESCOM). The team left Bangalore today to attend for restoration work.

BESCOM, earlier had deputed a team of same composition on 19.08.2019 to attend to restoration of power supply infrastructure in HESCOM areas.

[

The two teams which have been deputed in response to a request from HESCOM will involve in power supply restoration activities for the next two weeks.

## ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :**

ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ಕೆ.ಆರ್. ಪುರಂ (ಮೇಡಹಳ್ಳಿ) ಇಲ್ಲಿನ ವಿದ್ಯಾರ್ಥಿನಿಲಯಕ್ಕೆ ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲು ಹೆಚ್ಚುವರಿ ಕಟ್ಟಡದ ಅವಶ್ಯಕತೆಯಿರುವುದರಿಂದ ವಿದ್ಯಾರ್ಥಿನಿಲಯದ ಸಮೀಪದ ಮೇಡಹಳ್ಳಿ, ಪಾರ್ವತಿನಗರ, ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯಲ್ಲಿ ವಿದ್ಯಾರ್ಥಿನಿಲಯಕ್ಕೆ ಪಿ.ಡಬ್ಲ್ಯೂ.ಡಿ ನಿಗಧಿಪಡಿಸುವ ದರದಲ್ಲಿ ಕಟ್ಟಡದ ಮಾಲೀಕರು ಕಟ್ಟಡದ ಛಾಯಾಚಿತ್ರ ಮತ್ತು ಕಟ್ಟಡದ ದಾಖಲೆಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ, ಕೆ.ಆರ್.ಪುರಂ,

ಸಹಾಯಕ ನಿರ್ದೇಶಕರ ಕಚೇರಿಗೆ ಸೆಪ್ಟೆಂಬರ್ 15 ರೊಳಗೆ ಸಂಪರ್ಕಿಸಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Karnataka State has ranked no 1, in the Country in the State Rooftop Solar

Bengaluru, August 22 (Karnataka Information)

Karnataka State has ranked no 1, in the Country in the State Rooftop Solar Attractiveness Index.

During the Review, Planning and monitoring meeting with States and State Power Utility, Power Minister, Sri R.K Singh launched the State Rooftop Solar Attractiveness Index - **"SARAL",** on 21.08.2019 and encouraged all the states to adopt the best practices being followed by top ranking States.

**"SARAL",** captures 5 key aspects:

- Robustness of Policy frame work
- Implementation environment
- Investment Climate
- Consumer experience
- Business Eco system

Many initiatives have been taken by BESCOM to sensitise consumers and achieve the ambitious target of MNRE of 2400 MWs by 2022.

- Simplified online application for applying for solar rooftop.
- Simplified guidelines/ procedure/ timeline for quick clearance of applications.
- Launch of CREST (Rooftop Evaluation for Solar Tool) using Lidar Technology to access the Rooftop potential for installation of Solar by Rooftop owners & study the business case for investment.
- Helpdesk at Corporate office to address the SRTPV issues with dedicated landline & email id.
- Formation of Solar Billing Centre at Corporate office to ensure timely payments for gross metering &net metering for 1 Lakh & above billing amount.
- Consumer interaction meeting regularly held at Sub Divisional level.

Till date BESCOM has Grid connected about 1800 no. of Solar Consumers of all categories with a total capacity of about 125 MWs.

BESCOM is gearing up for launch of Residential Rooftop Programme for achieving 100 MW target for FY 20 and also submitted proposal to MNRE to provide CFA (Central Finance Assistance) to encourage Domestic Consumers.

| % CFA | Capacity in kWp |
|---|---|
| CFA @ 40% | For capacity upto 3 kWp |
| CFA @ 20% | Beyond 3 kWp and Upto 10kWp |
| CFA @ 20% | For GHS/RWA capacity upto 500kWp ( limited to 10kWp |

| | |
|---|---|
| | per house and total upto 500kWp) |
| CFA shall be on bench mark cost of MNRE for the state / UT or lowest of the costs discovered in the tenders for that state /UT in that year, whichever is lower | |

## ಸೋಲಾರ್ ರೂಫ್ ಟಾಪ್

**ಬೆಂಗಳೂರು, ಆಗಸ್ಟ್ 22 ( ಕರ್ನಾಟಕ ವಾರ್ತೆ ) :**

ಸೋಲಾರ್ ರೂಫ್ ಟಾಪ್ ಆಕರ್ಷಣೆ ಸೂಚ್ಯಂಕದಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಅಗ್ರ ಸ್ಥಾನವನ್ನು ಪಡೆದಿದ್ದು, ಅಗ್ರ ಸ್ಥಾನದಲ್ಲಿರುವ ರಾಜ್ಯಗಳ ಸುಧಾರಿತ ವಿಧಾನಗಳನ್ನು ಇತರೆ ರಾಜ್ಯಗಳು ಅಳವಡಿಸಿಕೊಳ್ಳಲು ಮಾನ್ಯ ಕೇಂದ್ರ ಇಂಧನ ಸಚಿವ ಶ್ರೀ. ಆರ್.ಕೆ.ಸಿಂಗ್ ರವರು ಕರೆ ನೀಡಿದರು.

ರಾಜ್ಯಗಳ ಮತ್ತು ರಾಜ್ಯದ ಇಂಧನ ಇಲಾಖೆಗಳವಿಮರ್ಶೆ, ಯೋಜನೆ ಮತ್ತು ಮೇಲ್ವಿಚಾರಣಾ ಸಭೆಯಲ್ಲಿಸೋಲಾರ್ ರೂಫ್ ಟಾಪ್ ಆಕರ್ಷಣೆ ಸೂಚ್ಯಂಕ–“ಸರಳ್” ಅನ್ನು ದಿನಾಂಕ 21.08.2019 ರಂದು, ಮಾನ್ಯ ಸಚಿವರು ಅನಾವರಣಗೊಳಿಸಿ ಮಾತನಾಡಿದರು.

“ಸರಳ್” ಈ ಕೆಳಕಂಡ 5 ಅಂಶಗಳನ್ನು ಒಳಗೊಂಡಿದೆ:

- ಸೌರನೀತಿಯ ಚೌಕಟ್ಟಿನ ದೃಢತೆ
- ಅನುಷ್ಠಾನ ಪರಿಸರ
- ಹೂಡಿಕೆ ವಾತಾವರಣ
- ಗ್ರಾಹಕರ ಅನುಭವ
- ವಹಿವಾಟಿನ ವ್ಯವಸ್ಥೆ

ಗ್ರಾಹಕರನ್ನು ಸಂವೇದನಾಶೀಲಗೊಳಿಸಲು ಮತ್ತು 2022 ರ ವೇಳೆಗೆ 2400 ಮೆಗಾ ವ್ಯಾಟ್‌ಗಳ ಎಂ.ಎನ್.ಆರ್.ಇ. ಮಹತ್ವಾಕಾಂಕ್ಷೆಯ ಗುರಿಯನ್ನು ಸಾಧಿಸಲು ಬೆವಿಕಂ ವತಿಯಿಂದಈ ಕೆಳಕಂಡ ಉಪಕ್ರಮಗಳನ್ನು ಕೈಗೊಂಡಿದೆ:

- ಸೋಲಾರ್ ರೂಫ್ ಟಾಪ್ ಅರ್ಜಿ ಸಲ್ಲಿಸಲು ಸರಳೀಕೃತ ಆನ್‌ಲೈನ್ ಅಪ್ಲಿಕೇಷನ್

- ಅರ್ಜಿಗಳ ತ್ವರಿತ ವಿಲೇವಾರಿಗಾಗಿ ಸರಳೀಕೃತ ಮಾರ್ಗಸೂಚಿಗಳು/ಕಾರ್ಯವಿಧಾನ/ಕಾಲಾವಧಿ
- ಸೋಲಾರ್ ರೂಫ್ ಟಾಪ್ ಮಾಲೀಕರಿಂದ ಸೌರ ಘಟಕದ ಸಾಮರ್ಥ್ಯವನ್ನು ಹಾಗೂ ಹೂಡಿಕೆಯ ವ್ಯವಹಾರವನ್ನು ತಿಳಿಯಲು LiDAR ತಂತ್ರಜ್ಞಾನವನ್ನು ಬಳಸಿಕೊಂಡು CREST ಮೂಲಕ ಅಧ್ಯಯನ ಮಾಡುವುದು
- ಸೋಲಾರ್ ರೂಫ್ ಟಾಪ್ ವ್ಯವಸ್ಥೆಗೆ ಸಂಬಂಧಿಸಿದ ಸಮಸ್ಯೆಗಳನ್ನು ದೂರವಾಣಿ ಮತ್ತು ಇ–ಮೇಲ್ ಮುಖಾಂತರ ಪರಿಹರಿಸಲು ನಿಗಮ ಕಛೇರಿಯಲ್ಲಿ ಸಹಾಯವಾಣಿಯನ್ನು ಸ್ಥಾಪಿಸಲಾಗಿದೆ.
- ಒಂದು ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟು ಇರುವ ಒಟ್ಟು ಮಾಪಕ ಮತ್ತು ನಿವ್ವಳ ಮಾಪಕ ಬಿಲ್ಲಿಂಗ್ ಮೊತ್ತಗಳ ಸಮಯೋಚಿತವಾದ ಪಾವತಿಗಳನ್ನು ನಿರ್ವಹಿಸಲು ನಿಗಮ ಕಛೇರಿಯಲ್ಲಿ ಬಿಲ್ಲಿಂಗ್ ಕೇಂದ್ರವನ್ನು ರಚಿಸಲಾಗಿದೆ
- ಗ್ರಾಹಕರ ಸಂವಹನ ಸಭೆಗಳನ್ನು ನಿಯಮಿತವಾಗಿ ಉಪವಿಭಾಗದ ಮಟ್ಟದಲ್ಲಿ ನಡೆಸಲಾಗುತ್ತಿದೆ

ಬೆವಿಕಂ ವ್ಯಾಪ್ತಿಯಲ್ಲಿ ಈವರೆಗೆ ಸುಮಾರು 1800 ಸಂಖ್ಯೆಯ 125 ಮೆಗಾವ್ಯಾಟ್ ಸಾಮರ್ಥ್ಯ ಹೊಂದಿರುವ ಎಲ್ಲಾ ವರ್ಗಗಳ ಮೇಲ್ಚಾವಣಿ ಸೌರಶಕ್ತಿ ಘಟಕಗಳನ್ನು ಬೆವಿಕಂನ ಗ್ರಿಡ್‌ಗೆ ಸಂಪರ್ಕಗೊಳಿಸಲಾಗಿದೆ.

ಆರ್ಥಿಕ ವರ್ಷ 2020 ರ ಒಳಗೆ 100 ಮೆಗಾವ್ಯಾಟ್‌ಗೃಹೋಪಯೋಗಿ ಮೇಲ್ಚಾವಣಿ ಯೋಜನೆಯ ಗುರಿ ಸಾಧಿಸಲು ಬೆವಿಕಂಸಜ್ಜಾಗುತ್ತಿದೆ. ಹಾಗೂ ಸ್ಥಳೀಯ ಗ್ರಾಹಕರನ್ನು ಉತ್ತೇಜಿಸಲು ಸಿ.ಎಫ್.ಎ(ಕೇಂದ್ರ ಆರ್ಥಿಕ ಸಹಾಯಧನ) ಅನ್ನು ಒದಗಿಸುವ ಸಲುವಾಗಿ ಎಂ.ಎನ್.ಆರ್.ಇಗೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿದೆ.

| **ಸಿ.ಎಫ್.ಎ%** | **ಸಾಮರ್ಥ್ಯ ಕಿ.ವ್ಯಾಗಳಲ್ಲಿ** |
|---|---|
| **ಸಿ.ಎಫ್.ಎ@40%** | 3ಕಿ.ವ್ಯಾ ಸಾಮರ್ಥ್ಯದವರಗೆ |
| **ಸಿ.ಎಫ್.ಎ@20%** | 3ಕಿ.ವ್ಯಾ ರಿಂದ 10ಕಿ.ವ್ಯಾ ಸಾಮರ್ಥ್ಯದವರಗೆ |
| **ಸಿ.ಎಫ್.ಎ@20%** | ಜಿ.ಹೆಚ್.ಎಸ್/ಆರ್.ಡಬ್ಲ್ಯೂ.ಎ 500 ಕಿ.ವ್ಯಾ ಸಾಮರ್ಥ್ಯದವರಗೆ (ಪ್ರತಿ ಮನೆಗೆ 10ಕಿವ್ಯಾ ನಿಂದ 500 ಕಿ.ವ್ಯಾ ವರೆಗೆ ಸೀಮಿತವಾಗಿದೆ) |

ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಎಂ.ಎನ್.ಆರ್.ಇ ನ ದರ ಅಥವಾ ಆ ವರ್ಷದಲ್ಲಿ ರಾಜ್ಯ/ ಕೇಂದ್ರಾಡಳಿತ ಪ್ರದೇಶಗಳಲ್ಲಿನ ಟೆಂಡರ್‌ಗಳಲ್ಲಿ ಕಡಿಮೆ ದರ, ಇವುಗಳಲ್ಲಿನ ಕನಿಷ್ಠ ದರವು ಕೇಂದ್ರ ಆರ್ಥಿಕ ಸಹಾಯಧನದ (ಸಿ.ಎಫ್.ಎ) ಮಾನದಂಡವಾಗಿರುತ್ತದೆ.